# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಮೋಹನ ಕಲ್ಯಾಣಿ

ಕವಿ

## ದಿನೇಶ ಉಪ್ಪೂರ ಎಮ್. ಎನ್.

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠೆ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಕಾಲ್ಪನಿಕ

**ಆಧಾರ ಗ್ರಂಥ:**

ಕಾಲ್ಪನಿಕ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಕವಿಯ ಗಣಕೀಕೃತ ಪ್ರತಿ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೭೨

**ಪಾತ್ರಗಳು:**

ಕೇತಾರಗೌಳ, ಮಂತ್ರಿ, ಮೋಹನ, ವನಚಾರಕ, ಕಲ್ಯಾಣಿ, ಸಖಿಯರು, ಘಂಟಾರವ, ವರಾಳಿ, ಗುಪ್ತಚರ, ಕುರಂಜಿ ಭೂಪ, ಶಿವರಂಜಿನಿ, ಶಹನ, ದೂತ, ಜಂಜೂಟಿ ಮುನಿ ಮತ್ತು ಇತರರು

**ಕಥಾ ಸಾರಾಂಶ:**

ಕಾಂಬೋಜರಾಜ್ಯದ ದೊರೆ ಕೇತಾರಗೌಳನ ಮಗ ಮೋಹನನ ಮೃಗಯಾವಿಹಾರ, ಅಠಾಣದ ದೊರೆ ಕುರಂಜಿಯ ಮಗಳು ಕಲ್ಯಾಣಿಯ ಜಲಕ್ರೀಡೆ ವನಸಂಚಾರ, ರಕ್ಕಸ ಘಂಟಾರವನ ಬಲಾತ್ಕಾರ. ಮೋಹನನಿಂದ ಘಂಟಾರವನ ಸಂಹಾರ. ಘಂಟಾರವನ ತಮ್ಮ ವರಾಳಿಯ ಪ್ರತೀಕಾರ. ಗುಪ್ತಚರನಾಗಿ ಬಂದು ಕುರಂಜಿಯ ಅಪಪ್ರಚಾರ. ಕೇತಾರಗೌಳ ಕುರಂಜಿಯರ ಯುದ್ಧ. ಮೋಹನ ಹಾಗೂ ಕಲ್ಯಾಣಿಯ ಆಗಮನದಿಂದ ಸತ್ಯ ಸಮಾಚಾರ. ಕುರಂಜಿಯ ಮೋಸದಿಂದ ಶಿವರಂಜಿನಿಯು ಮಗ ಶಹನನ ಜೊತೆ ಪಲಾಯನ. ಜಂಜೂಟಿಮುನಿಯಿಂದ ಸತ್ಕಾರ. ವರಾಳಿಯಿಂದ ಮುನಿಯ ಸಂಹಾರ. ಶಹನನಿಂದ ಕಲ್ಯಾಣಿಯ ಅಪಹಾರ, ವರಾಳಿಯಿಂದ ಸಮಾಚಾರ, ಅಣ್ಣತಮ್ಮರೊಳಗೆ ಕಲಹ, ಸೋತ ತಮ್ಮನಿಂದ ಅಮ್ಮನ ದರ್ಶನ. ವರಾಳಿಯಿಂದ ಕಲ್ಯಾಣಿಯ ಬಲಾತ್ಕಾರ. ಶಹನನಿಂದ ದುಷ್ಟನ ಸಂಹಾರ. ಮೋಹನ ಕಲ್ಯಾಣಿಯರ ಮದುವೆ. ಸುಖಾಂತ್ಯ

**ಕವಿ ಪರಿಚಯ:**

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಹಾಲಾಡಿಯ ಚೇರ್ಕಿ ಎಂಬಲ್ಲಿ ೧೯೬೨ ರ ಆಗಸ್ಟ ೧೩ರಂದು ಬಡಗುತಿಟ್ಟಿನ ಪ್ರಸಿದ್ಧ ಭಾಗವತರಾದ ಮಾರ್ವಿ ನಾರ್ಣಪ್ಪ ಉಪ್ಪೂರರ ಎಂಟನೇ ಹಾಗೂ ಕೊನೆಯ ಮಗನಾದ ದಿನೇಶ ಉಪ್ಪೂರ ಮನೆಯಲ್ಲಿ ಯಕ್ಷಗಾನ ವಾತಾವರಣದಲ್ಲಿಯೇ ಬೆಳೆದವರು. ಚಿಕ್ಕಂದಿನಲ್ಲಿ ಸಾಲಿಗ್ರಾಮ ಮಕ್ಕಳ ಮೇಳದ ಕಲಾವಿದರೂ ಆಗಿದ್ದ ದಿನೇಶ ಸ್ವತಃ ಶಂಕರನಾರಾಯಣ ಯಕ್ಷಗಾನ ಸಂಘ ಎಂಬ ಒಂದು ಹವ್ಯಾಸಿ ಸಂಸ್ಥೆಯನ್ನು ಕಟ್ಟಿ ಹಲವಾರು ಪ್ರಸಂಗಗಳನ್ನು ಪ್ರಾಯೋಗಿಕವಾಗಿ ನಿರ್ದೇಶನ ಮಾಡಿ ಬೇರೆ ಬೇರೆ ಸ್ಥಳಗಳಲ್ಲಿ ಆಟವಾಡಿ ಹಲವು ವರ್ಷ ನಡೆಸಿದ್ದರು. ಜೀವನ ನಿರ್ವಹಣೆಗಾಗಿ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕಾರ್ಯನಿರ್ವಹಿಸಿದ್ದು ಅದರಲ್ಲಿ ಅಧಿಕಾರಿಗಳಾಗಿದ್ದರು.

ಐರೋಡಿ ಸದಾನಂದ ಹೆಬ್ಬಾರರ ಹವ್ಯಾಸಿ ಮೇಳದಲ್ಲಿ ಸ್ತ್ರೀ ವೇಷಧಾರಿಗಳಾಗಿದ್ದರು. ಅವರ ತಂದೆಯವರ ಆಡಿಯೋ ವಿಡಿಯೋಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಅವರು ಯಕ್ಷಗಾನ ಪ್ರಪಂಚಕ್ಕೆ ಉಪಯೋಗವಾಗುವ ಹಲವಾರು ಅಮೂಲ್ಯ ಆಡಿಯೋ ವಿಡಿಯೋಗಳನ್ನು ದಾಖಲೆಗಳನ್ನು ಸಂಗ್ರಹಿಸಿ ಇಟ್ಟಿದ್ದಾರೆ.

ಇವರು ಬರೆದ ಪ್ರಸಂಗಗಳು: ಚಂದ್ರನಖಿ, ಪ್ರತಿಮಾ ಪ್ರಸಂಗ, ಮೋಹನ ಕಲ್ಯಾಣಿ, ಶಂಕರನಾರಾಯಣ ಮಹಾತ್ಮೆ, ಸಂಗರ ಕೇಳು ಕುಂತಿ ಕತೆ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಕೇದಾರಗೌಳ - ತ್ರಿವುಡೆ**

ಧರಣಿಯೊಳು ಕಾಂಬೋಜದೇಶ |
ಕ್ಕರಸನಹ ಕೇತಾರಗೌಳನು |
ಹರುಷದೊಳು ಸಭೆಗೊಟ್ಟು ಸಚಿವರೊ |
ಳೆರಕವಾಗುತ ನುಡಿದನು | ಮನಸಿನಿರವ || 1 ||

ಅಷ್ಟಸಂಪದವಿಹುದು ಸತಿ ಧ |
ರ್ಮಿಷ್ಟೆ ಶಿವರಂಜನಿಯ ಗರ್ಭದಿ |
ಪುಟ್ಟಿಹರು ಮೋಹನನು ಸುರುಟಿಯ |
ರೊಟ್ಟಿನಲಿ ಶಹನಾಖ್ಯನು | ಕೇಳಿರೆಲ್ಲ || 2 ||

ಪುತ್ರಿಯಹ ಸುರುಟಿಯನು ತೋಡಿ ಧ |
ರಿತ್ರಿಪಾಲನಿಗಿತ್ತು ಅವನೊಡ |
ಮೈತ್ರಿಯಿಂದಿರುತಿರುವೆ ಧರೆಯ ಸು |
ಸೂತ್ರದಿಂ ಪಾಲಿಸಿದೆನು | ಇಂದಿನನಕ || 3 ||

**ಕಾಂಭೋದಿ - ಝಂಪೆ**

ಕೇಳಿಮಂತ್ರಿಗಳೆ ಮುದ ತಾಳಿಹರೆ ಜನರೆಲ್ಲ |
ಬಾಳಿನಲಿ ಸದ್ಧರ್ಮದಿಂದ ||
ಕಾಲಕಾಲಕೆ ನಮ್ಮ ಹೇಳಿಕೆಯ ತೆರದಿ ಸೌ |
ಶೀಲರೆನಿಸಿಹರೇನು ಎನಲು || 4 ||

ದೊರೆರಾಯ ನಿನ್ನ ಮನದಿರವನರಿತಿಹರೆಲ್ಲ |
ನಿರುತ ಸೌಖ್ಯದೊಳು ಬಾಳಿಹರು ||
ದುರಿತ ಭಯ ಕಳವು ಹಾದರ ದುಷ್ಕೃತನ ಕೊಲೆಗ |
ಳಿರದೆ ನೆಮ್ಮದಿಯ ಪಡೆದಿಹರು || 5 ||

**ಭಾಮಿನಿ**

ಅರಸಗಿಂತೋಲೈಸಿರಲು ವನ |
ಚರರು ಬಂದಳಲುತ್ತಲೆಮ್ಮನು |
ಪೊರೆಯದಿರೆ ಉಳಿಗಾಲವಿಲ್ಲೆನುತೆರಗಲಾ ನೃಪನು ||
ಚರಣದಲಿ ಹೊರಳುವರ ತಾ ಬಲು |
ಕರುಣೆಯಲಿ ಮನ್ನಿಸುತಭಯ ಕೊ |
ಟ್ಟೆರಗಿದಾಪತ್ತೇನು ಬೆಸಸಿರಿ ಎನಲು ಪೇಳಿದರು || 6 ||

**ಮುಖಾರಿ - ಏಕ**

ಕಾಲೀಗ್ಬದ್ದೆವು ಅರಿಕೆ ಬುದ್ದಿ | ಕೇಳೆಮ್ಮ ಸುದ್ದಿ ||
ಕಾಲೀಗ್ಬದ್ದೆವು ಅರಿಕೆ ಬುದ್ದಿ || ಪ ||
ಹೇಳುವುದೆಂತದು ತಾಳುಕೆ ಎಡಿಯಾ |
ಖೂಳ ಪಿರಾಣಿಯ ಹಾವಳಿ ತಡಿಯಾ ||
ಬಾಳೆ ಕಬ್ಬು ಬೆಳೆ ಹಾಳಾಯ್ತೊಡಿಯಾ |
ಕಾಲ ಕಳಿದೆ ಮಿಕ ಕೊಲ್ಲುಕೆ ನಡಿಯಾ || 7 ||

ನೋಡಲ್ಲಿ ಬತ್ತುತ್ತ ಹಿಂಡಿಂಡೆ | ಅಡ್ಡಾಕುದೆಂಗೆ ||
ನೋಡಲ್ಲಿ ಬತ್ತುತ್ತ ಹಿಂಡಿಂಡೆ ||
ಕಾಡೆಮ್ಮೆ ಮುಳ್ಳಂದಿ ಸಿಂಗ | ಕೈಡಿ ಕಾಡ್ಕೋಣ ಮಂಗ |
ಪೀಡಿ ಬಾಳನಾವ್ಬದುಕುದು ಹೆಂಗ |
ಕಾಡಿಗೆ ಬಂದ್ನಿಲ್ಲೆನ್ಸಮ್ಮಾ ಬಂಗ || 8 ||

**ಮೋಹನ - ಝಂಪೆ**
ನುಡಿ ಕೇಳಿ ಕೋಪದಿಂದ | ಭೂಪ ಪ |
ಲ್ಲಡಿದು ಚಾರಕರಿಗೆಂದ ||
ಬಿಡಿ ಭಯವ ಬೇಟೆಯನ್ನು | ಆಡಿ ಮೃಗ |
ಗಡಣವನು ತರಿವೆ ನಾನು || 9 ||

ಎನುತ ಬಲು ಸೇನೆ ಸಹಿತ | ಧಾರಿಣಿಪ |
ನನುವಾಗಲದ ತಿಳಿಯುತ ||
ಅನಿತರೊಳಗೈತಂದನು | ಪಿತಗೆ ಮೋ |
ಹನನೆರಗುತಿಂತೆಂದನು || 10 ||

**ಮಾರವಿ - ಏಕ**
ತಾತನೆ ನೀವಿದ | ಕೇತಕೆ ಪೊರಟಿರಿ |
ಜಾತನು ಇರುವಾಗ ||
ಪ್ರೀತಿಯೊಳಪ್ಪಣೆ | ಯಿತ್ತರೆ ಮೃಗಗಳ |
ಘಾತಿಸಿ ಬಹೆನೀಗ || 11 ||

**ದೇವಗಾಂಧಾರಿ - ಏಕ**
ಸದರವಲ್ಲವು ಬೇಟೆ | ಮಗನೇ ಸಣ್ಣವ ನೀನು |
ಒದಗುವುದೆಡರಡಿಗಡಿಗೆ ||
ಮುದದೊಳಗರಮನೆ | ಯೊಳಗಿರು ಮೃಗಗಳ |
ಸದೆದು ಬಪ್ಪೆನು ಅರಗಳಿಗೆ || 12 ||

**ಮಾರವಿ - ಏಕ**
ಬಿಡಿ ಬಿಡಿ ಪಿತ ನಾ | ಹುಡುಗನೆ ಖಡ್ಗಕೆ |
ಕುಡಿಸುವೆ ರುಧಿರವನು ||
ಕಡಿಕಡಿದಾಮೃಗ | ಗಡಣವ ಸವರುವೆ |
ಕೊಡಿರಪ್ಪಣೆಯನ್ನು || 13 ||

**ದೇವಗಾಂಧಾರಿ - ಏಕ**
ಕುರಿಯು ಪುಟ್ಟುವುದೇ ಕೇ | ಸರಿಯ ಗರ್ಭದಲಿ ಬಾ |
ಪುರೆ ಬಲುತೋಷವಾಯ್ತು ||
ದುರುಳಪ್ರಾಣಿಗಳನು | ತರಿದುಬಾರೆನ್ನುತ |
ಹರಸಿ ಕಳುಹಿದನಾಕ್ಷಣ || 14 ||

**ಸೌರಾಷ್ಟ್ರ - ತ್ರಿವುಡೆ**
ತಂದೆಯಿಂದಪ್ಪಣೆಯ ಪಡೆದೈ |
ತಂದನಾ ಮೋಹನನು ಶಬರರ |
ವೃಂದವನು ಜತೆಗೂಡಿ ತವಕದೊ | ಳಂದು ವನಕೆ || 15 ||

ಬಂದು ಕಾಡಿನ ದುಷ್ಟ ಮೃಗಗಳ |
ಸಂದಣಿಯ ತರಿದಟ್ಟಿ ಈಕ್ಷಿಸ |
ಲಂದು ತಿಳಿದನು ಸಹಚರರು ಬಲು | ಹಿಂದುಳಿದುದ || 16 ||

**ಜಂಜೂಟಿ - ರೂಪಕ**

ಘೋರ ವಿಪಿನದೆಡೆಗೆ ಬಂದು | ದಾರಿ ತಪ್ಪಿದೆ ||
ಸೇರಲೆಂತೊ ಪುರವ ಹೊತ್ತು | ಮೀರಿ ಹೋಗಿದೆ || 17 ||

ಬಳಲಿ ಬರುತ ಎದುರಲೊಂದು | ಸಲಿಲ ಕಂಡನು ||
ಕಳೆವೆ ಶ್ರಮವನೆನುತ ಮಿಂದು | ಮಲಗಿಕೊಂಡನು || 18 ||

**ಕಲ್ಯಾಣಿ - ಅಷ್ಟ**

ಸರಸಿಜವದನೆ ಕಲ್ಯಾಣಿ ಸೊಬಗಿನಲಿ |
ಹರಿಣಾಕ್ಷಿ ಮತ್ತಸಿಂಧೂರ ನಡಿಗೆಯಲಿ ||
ಕೊರಳ ಮುತ್ತಿನಹಾರ ಕಾಂತಿ ಬೆಳಗುತಲಿ |
ಮುರಹರಸುತನರಗಿಣಿಯ ಬೆಡಗಿನಲಿ ||
ಧರಿಸಿ ಉಚಿತಾಭರಣಗಳ ಸಿಂ |
ಗರಿಸಿಕೊಳುತೋರಗೆಯವರನೊಡ |
ಹರುಷದಲಿ ಕಲಹಂಸಗಾಮಿನಿ |
ಸರಸಿಯೆಡೆಗಾತುರದಿ ಬಂದಳು ||
ಸರಸದೊಳು ಜಲಕ್ರೀಡೆಗೈದಳು || 19 ||

**ಭೀಮಪಲಾಸ್ - ಅಷ್ಟ**

ತರುಣಿಯರೆಲ್ಲರು ಶರಕೇಳಿಯಾಡಿ ಸಂ |
ಚರಿಸುತುದ್ಯಾನದೊಳಿರುವ ||
ಪರಿಪರಿ ಸುಮಗಳ ಕೊಯ್ದು ಮುಡಿವಾಸೆಯ |
ನಿರಿಸಿ ಮುಂದೊರಿಯುತಲಿರಲು || 20 ||

**ಕಂದ**

ದುರುಳನು ಘಂಟಾರವ ಗ |
ಹ್ವರದೊಳು ಮಲಗಿದವ ಮೈಮುರಿದೆದ್ದಿಳೆ ತಾಂ ||
ಬಿರಿವಂತಾರ್ಭಟಿಸುತ್ತಲಿ |
ಅರಿತಂ ನರವಾಸನೆಯಾಘ್ರಾಣಿಸುತಾಗಲ್ || 21 ||

**ಘಂಟಾರವ - ಅಷ್ಟ**

ಏನಿದಚ್ಚರಿ ಬಪ್ಪುದೇ ಮರ್ತ್ಯರು ||
ತಾನೆ ಭಾಗ್ಯವು ಬಂದಿಹುದು ಮೃ |
ಷ್ಟಾನ್ನ ಉಣ್ಣುವ ಕಾಲವು || 22 ||

ನರರ ಮಾಂಸವ ಮೆದ್ದು ಬಿಸಿರಕ್ತವ ||
ಸುರಿಯದೇ ಬಲು ಕಾಲವಾಯಿತು |
ಒರಟುಗೊಂಡಿದೆ ಜಿಹ್ವೆಯು || 23 ||

ಎಂದು ಯೋಚಿಸಿ ಹೊರವಂಟು ಗುಹೆಯಿಂದ ||
ಸಂದುಗೊಂದಿನೊಳರಸುತಿದಿರಲಿ |
ಇಂದುಮುಖಿಯನು ಕಂಡನು || 24 ||

**ಸೌರಾಷ್ಟ್ರ - ತ್ರಿವುಡೆ**
ಆರರೆ ಏನಾಶ್ಚರ್ಯ ಹಸಿವ |
ನ್ನರಸಿ ಬಂದರೆ ಯಾವೆಡೆಯೊಳವ |
ತರಿಸಿತೀ ಸೌಂದರ್ಯವೆನುತವ | ಬೆರಗುವಟ್ಟು || 25 ||

ನಿತ್ಯಯಿವಳೊಡಗೂಡಿ ಸುಖಿಸುವೆ |
ಚಿತ್ರಭವನಾಟದೊಳಗೆನ್ನುತ |
ವೃತ್ತಕುಚೆಯಳ ತಡೆದನಾ ಉ | ನ್ಮತ್ತದೈತ್ಯ || 26 ||

**ಸಾಂಗತ್ಯ - ರೂಪಕ**
ಎಷ್ಟು ಪೇಳಲು ಕಡು ದುಷ್ಟ ನಿನ್ನಯ ಮನ |
ದಿಷ್ಟವೆಂದಿಗು ಸಲ್ಲದು ||
ಕೆಟ್ಟು ಮುಂದೊರಿದರೆ ಕಷ್ಟ ಬಪ್ಪುದು ಬೇಗ |
ಬಟ್ಟೆವಿಡಿದು ಪೋಪುದು || 27 ||

**ಕೇದಾರಗೌಳ - ಝಂಪೆ**
ತರುಣಿ ನೀನೊಪ್ಪದಿರಲು | ಬಿಡೆ ಬಲಾ |
ತ್ಕರಿಸುವೆನು ನಾನು ಕೇಳು ||
ಸ್ಮರನಾಟದಿಂದಲೆನ್ನ | ಕೂಡಿದೊಡೆ |
ಹರುಷಗೊಳಿಸುವೆನು ನಿನ್ನ || 28 ||

ತಾಳುತಾಳೆನಲಧಮನು | ಪಿಡಿದೆಳೆದ |
ಬಾಲಕಿಯ ಸಿರಿಮುಡಿಯನು ||
ಕಾಳಾಹಿವೇಣಿ ಕೂಗೆ | ಭಯಗೊಂಡು |
ಕೇಳಿಸಿತು ಮಲಗಿದವಗೆ || 29 ||

**ಭಾಮಿನಿ**
ಕಷ್ಟದೊಳು ಸಿಲುಕಿಹರದಾರೋ |
ಕೆಟ್ಟು ಕೂಗುತಲಿಹರ ನಾ ಸಂ |
ಕಷ್ಟದಲಿ ಕಾಯದಿರೆ ಬದುಕಿನ್ನುಳಿದು  ಫಲವೇನು ||
ದುಷ್ಟನನು ಓಡಿಸುತ ಆರ್ತರ |
ಕಷ್ಟವನು ನೀಗುವೆನು ಎನ್ನುತ |
ತಟ್ಟನಾಕ್ಷಣ ಹೊರಟ ಕೂಗಿನ ಸೋವ ತಾ ತಿಳಿದು || 30 ||

**ಶಂಕರಾಭರಣ - ಮಟ್ಟೆ**
ನಾರಿಯಳನು ಪಿಡಿದು ಬಲಾ |
ತ್ಕಾರಗೈವ ನೀಚ ನಿನ್ನ |
ಗಾರುಗೆಡಿಪೆನಿವಳ ಬಿಟ್ಟು |
ದೂರ ಸಾರೆಲೋ || 31 ||

ಯಾರು ಇತ್ತರಯ್ಯ ಊರ |
ಪಾರುಪತ್ಯ ಕೆಲಕೆ ಸಾರೋ |
ಮೀರಿ ಬಂದರೀಗ ಯಮನ |
ಊರ ತೋರುವೆ || 32 ||

ಎನಲು ಕೇಳಿ ನಿಶಿಚರಧಮ |
ನಿನಗೆ ಕಡೆಯ ಕಾಲವೆನುತ |
ಕನಲಿ ಬಿಟ್ಟನಾಗ ಸರಳ |
ಕಿನಿಸಿನಿಂದಲಿ || 33 ||

**ಭಾಮಿನಿ**
ಬಾಣವೆಸೆಯಲು ಕೂಗುತಾ ಖಳ |
ಕ್ಷೋಣಿಗುರುಳಲು ಬಳಿಕ ಸರಿಸೃಪ |
ವೇಣಿ ಬಂದರೆಗಿದಳು ಮೋಹನನಡಿಗೆ ಜಯವೆನುತ ||
ತ್ರಾಣಿ ನಿನಗೆಣೆಯಾದವರ ನಾ |
ಕಾಣೆ ಜಗದೊಳಗೆನಲಿಕಾ ಶಿವ |
ನಾಣೆ ನಿನಗಿನ್ನಭಯ ನಿನ್ನಯ ಪುರಕೆ ಸಾರೆನಲು || 34 ||

**ತೋಡಿ - ಅಷ್ಟ**
ತರುಣ ನನ್ನ ಮಾನವುಳಿಸಿ |
ಪೊರೆದ ನೀವು ಬರಿದೆ ಹೀಗೆ |
ತೆರಳುವುದೆ ಸತ್ಕರಿಸುವಾಸೆ |
ಪುರಕೆ ಬನ್ನಿರೀಗಲೆ || 35 ||

ಮತ್ತಕಾಶಿ ಕೇಳೆ ಇಂತ |
ಧೂರ್ತರನ್ನು ತರಿಯದಿರಲು |
ವ್ಯರ್ಥಬಾಳು ಕ್ಷಾತ್ರರೆಮ್ಮ |
ಕರ್ತವ್ಯವಿದೆಂದನು || 36 ||

ಯಾತುಧಾನ ಕಡೆಯ ಮಂದಿ |
ಖಾತಿಯಿಂದ ಮತ್ತೆ ಕಾಡ್ವ |
ಭೀತಿ ಮನದಿಯಿಂತು ತೊರೆವ |
ರೀತಿ ಯೋಗ್ಯವೇನಯ್ಯ || 37 ||

ಆಗಲೆಂದು ಮೋಹನ ತಾ |
ನಾಗಗಮನೆಯೊಡನೆ ಹೊರಡೆ |
ಸಾಗಿ ಬಂದರತಿನಿಧಾನ |
ವಾಗಿ ಮಾತನಾಡುತ || 38 ||

**ಕಾಂಭೋದಿ - ಝಂಪೆ**
ಚಿತ್ರಜನ ರೂಪಸಂಪತ್ತಿನವ ನೀ ಕೇಳು |
ಬಿತ್ತರಿಸು ನಿನ್ನ ಪರಿಚಯವ ||
ಹೆತ್ತ ತಾಯ್ತಂದೆಗಳು ಮತ್ತೆ ಪುರವೆಲ್ಲಿ ನೀ |
ವಿತ್ತ ನಡೆತಂದ ಪರಿಯೇನು || 39 ||

ವನಿತೆ ಕೇಳ್ಕಾಂಭೋಜ ಜನಪತಿಯ ತನುಜ ಮೋ |
ಹನನೆನುವ ಪೆಸರು ಯುವರಾಜ||
ವನಕೆ ಮೃಗಗಳ ಬೇಟೆಗೆನುತ ಬರೆ ನಿನ್ನ ದರು |
ಶನವಾಯ್ತು ನೀನಾರು ಎನಲು || 40 ||

ವೀರ ಲಾಲಿಸತಾಣ  ಧಾರಿಣಿಪನೊಲವಿನ ಕು |
ಮಾರಿ ಕಲ್ಯಾಣಿ ಎಂಬುವಳು ||
ವಾರಿಕೇಳಿಗೆ ಬಂದು ಈ ರೀತಿಯಾಯ್ತೆನುತ |
ಲಾರಾಮದೊಳಗೈದುತಿರಲು || 41 ||

ಇತ್ತಲಾ ಘಂಟಾರವನ ತಮ್ಮ ವರಾಳಿಯು ನಿದ್ರಾವಿಘ್ನದಿಂದ ಎಚ್ಚತ್ತು ಗರ್ಜಿಸಿದ ಹ್ಯಾಗಯ್ಯ  ಎಂದರೆ-

**ಸೌರಾಷ್ಟ್ರ - ತ್ರಿವುಡೆ**
ಆರ ಬೊಬ್ಬೆಯದೆನ್ನ ನಿದ್ರೆಯ |
ಗಾರುಗೆಡಿಸಿತು ಎನುತಲಾ ಗಂ |
ಟಾರವನ ಸೋದರ ವರಾಳಿಯು | ಆರುಭಟಿಸಿ || 42 ||

ಬಂದು ನಿಟ್ಟಿಸಲಗ್ರಜನು ಮಡಿ |
ದಂದವನು ಹೂಂಕರಿಸಿ ಕ್ರೋಧವ |
ಹೊಂದಿ ನೋಡಿದ ಜೋಡಿ ಪೋಪುದ | ಮುಂದುವರಿದು || 43 ||

ಪುಂಡರೇ ಕಾರಣರು ಅಣ್ಣನ |
ರುಂಡಗಡಿದರು ಬಿಡೆನಿವರ ನಾ |
ಹಿಂಡುವೆನು ಎನ್ನುತ್ತ ಶಪಥವ | ಗೊಂಡು ಬಳಿಕ || 44 ||

**ಕಾಪಿ - ಅಷ್ಟ**
ಶೌರ್ಯದಿಂದಹ ಕಾರ್ಯವಲ್ಲ | ನಾ ಚಾ |
ತುರ್ಯದಿಂದಲೆ ಗೈವೆನೆಲ್ಲಾ ||
ಕಾರ್ಯವುಪಾಯದಿ ಗೈವೆನೆಂದೆನುತ ದು |
ಶ್ಚರ್ಯಬಂದುಸುರಿದನತಾಣಕೆ |
ಧೈರ್ಯದಲಿ ಭೂಪಾಲಗೊಂದಿಸಿ || 45 ||

**ಬೇಗಡೆ - ಅಷ್ಟ**
ದೊರೆಯೆ ಬೇಗಡೆಯೆಂಬ ಚಾರಕನು | ತವಸೇವಕನು ಸಂ |
ಚರಿಸುವೆನು ಛಪ್ಪನ್ನದೇಶವನು ||
ಪರಿಪರಿಯ ವೇಷದೊಳು ವಿಷಯವ |
ನರಸುತಲಿ ನಿಮಗಾಗಿ ದುಡಿಯುತ |
ಲಿರುವೆ ನಾನೀಗೊಂದು ಸುದ್ದಿಯ |
ನೊರೆಯ ಬಂದೆನು ಪಾದದೆಡೆಯಲಿ || 46 ||

ನಿನ್ನಸುತೆ ಜಲಕೇಳಿಗೆನ್ನುತಲಿ | ತೆರಳಿರುವ ಕಾಲದಿ |
ಘನ್ನಘಾತಕನೊಬ್ಬ ಸೊಕ್ಕಿನಲಿ ||
ಕನ್ಯೆಯನು ಛಲದಿಂದಲೊಯ್ಯವು |
ದನ್ನು ಕಂಡೆನು ತಡೆಯಹೋದರೆ |
ಕುನ್ನಿ ಬಡಿದೋಡಿಸಲು ನಾ ಬಲು |
ಬನ್ನ ಪಟ್ಟೆನು ಅರಸ ಲಾಲಿಸು || 47 ||

ನೆರೆಯ ಕಾಂಬೋಜದವನಿಪನಸುತನು | ಮೋಹನನೆನುವ ಪೆಸ |
ರಿರುವ ಬಾಲಕಧೂರ್ತ ಕೇಳವನು ||
ಅರಿಯೆಯಾ ನಿನ್ನುರು ಪರಾಕ್ರಮ |
ವರಿತು ಗೆಲ್ಲುವೆನೆಂಬ ಭ್ರಮೆಯಲಿ |
ಧುರಕೆ ಕರೆಯುವನೀಗ ಸುಮ್ಮನೆ |
ಇರುವುದೇ ಸೊಪ್ಪರಿಯೆ ನಡಿಯೆನೆ || 48 ||

**ಮಾರವಿ - ಏಕ**

ಮಗಳನು ಕದ್ದೀ | ಜಗಳವ ತಂದೊಣ |
ಪೊಗರನು ನಿಲಿಸುವೆನು ||
ಸಿಗಿದವರನು ಜವ | ನಗರಕೆ ಕಳಿಸುವೆ |
ನುಗಿಸುವೆ ರುಧಿರವನು || 49 ||

ತಡವೇತಕೆ ಪೊರ | ಮಡಲಾ ರಿಪುವನು |
ತುಡುಕಲು ಸೇನೆಯೆನೆ ||
ಗುಡುಗಲು ಸೇನಾ | ಗಡಣಪತಿಯು ಪೊಡ |
ಮಡುತಲಿ ಬೆಸಗೊಂಡ || 50 ||

ದೊರೆಯೆನಗಾಜ್ಞೆಯ | ನಿರಿಸಿದೆಯಾದರೆ |
ಧುರದಲಿ ವೈರಿಗಳ ||
ತರಿದಟ್ಟುತವರ | ಗರುವ ಮುರಿದು ತವ |
ತರಳೆಯ ಕರೆತರುವೆ || 51 ||

**ವಾರ್ಧಕ**

ವೀರಭಟರೊಡಗೂಡಿ ಧಾರಿಣಿಪನಾಕ್ಷಣದಿ |
ಸಾರಿ ಕಾಂಬೋಜಪುರ ದ್ವಾರಪಾಲರ ಬಡಿದು |
ಗಾರುಗೆಡಿಸಲ್ಕವರು ದೂರನೊಯ್ದರು ಜವದಿ ಭೂಪನಾಸ್ಥಾನಕೈದು ||
ನೀರ ಕಣ್ಣೊಳು ಸುರಿಸುತಾ ರಕ್ಷಿಸೆನ್ನಲು ವಿ |
ಚಾರವೇನೆನೆ ಬಂದ ವೈರಿಗಳ ಪರಿಯರುಹೆ |
ನಾರಿಯಳಿಗಾಗಿ ಹಗೆ ತೀರಿಸಲು ಬಂದರೆನಲಾಶ್ಚರ್ಯಗೊಂಡು ನೃಪತಿ || 52 ||

**ಭೈರವಿ - ಅಷ್ಟ**

ಚಾರರೆಂದುದನು ಕೇಳಿ | ಕ್ರೋಧವನು ಕೇ |
ತಾರಗೌಳಾಖ್ಯ ತಾಳಿ ||
ಚೋರರೀ ನೆವವೊಡ್ಡಿ | ಹೋರಾಡ ಬಂದಿಹರು |
ಭೂರಿಸೇನೆಯನು ಕೂಡಿ || 53 ||

**ಕೇದಾರಗೌಳ - ಝಂಪೆ**

ಬೆದರುತಿಹುದೇಕೆ ಹೇಳು | ನಾವವರ |
ಎದುರಿಸುತ ಕೊಡುವೆ ಗೋಳು ||
ಮದಮುಖರ ಗಾರುಗೆಡಿಸಿ | ಅಟ್ಟಿ ಯಮ |
ಸದನಕ್ಕೆ ನೇಮಕೊಡಿಸಿ || 54 ||

ಕೊಡಿಸಲಪ್ಪಣೆಯ ನನಗೆ | ಹವದಿ ಗುಡು |
ಗುಡಿಸಿ ಸಾಕೆನಿಪ ಅವರ್ಗೆ ||
ತಡವೇಕೆ ಸಮರಮುಖದೀ | ಉತ್ತರವ |
ಕೊಡುವ ನಾವಿಂದು ಭರದಿ || 55 ||

ಎನಲು ಕೇತಾರಗೌಳ | ಕಾಳಗಕೆ |
ಸನುಮತದಿ ಹೊರಡೆ ಬಹಳ ||
ಕಿನಿಸಿನಲಿ ಸೈನ್ಯ ಸಹಿತ | ಎದುರಾಗು |
ತನುವರಕೆ ನಿಂದ ನಗುತ || 56 ||

**ದೇಶಿ - ಮಟ್ಟೆ**
ನಿಲ್ಲು ಹವಕೆ ಕರೆದ ಪರಿಯ |
ನೆಲ್ಲ ಹೇಳೆಲಾ ||
ಚೆಲ್ಲ ಬಡಿವ ಮುನ್ನ ಹಿಂದೆ |
ಖುಲ್ಲ ಸಾರೆಲಾ || 57 ||

ತರಳೆಯನ್ನು ಕದ್ದು ಒಯ್ದ |
ಪರಿಯನಾಡೆಲಾ ||
ಸರಳಿನಿಂದ ಪೂಜೆಗೈವೆ |
ಧುರದಿ ನೋಡೆಲಾ || 58 ||

ನಿಮ್ಮ ಸುತೆಯನೊಯ್ದ ನೆವದಿ |
ನಮ್ಮ ಹಳಿಯುವೆ ||
ಸುಮ್ಮನೇತಕಿಲ್ಲಿ ಸಾಯ್ವೆ |
ಹಮ್ಮ ನಿಲಿಸುವೆ || 59 ||

ಬಲುಹು ನಿಮ್ಮೊಳಿರಲು ತೋರು |
ಅಳವಿಮುಖದಲಿ ||
ಲಲನೆಯನ್ನು ಒಯ್ದುದ್ಯಾಕೆ |
ಕಳವಿನಿಂದಲಿ || 60 ||

**ಕಾಪಿ - ಅಷ್ಟ**
ಕುವರಿಗಳ್ಳನು ಎಂಬುದಾಗಿ | ಬರಿ |
ನೆವನ ಹೇಳದೆ ಹಿಂದೆ ತೊಲಗಿ ||
ಕುವರ ಪೋಗಿಹ ಬೇಟೆಗೆನುತ ಕಾಡಿನ ಮೃಗ |
ನಿವಹವ ತರಿವುದೇಕೆಂಬುದ ನೀ ತಿಳಿ || 61 ||

ಕಳ್ಳನೆಂಬುದ ತಿಳಿದಿರುವೆ | ಈಗ |
ಸುಳ್ಳನು ಹೇಳುತಲಿರುವೆ ||
ಪೊಳ್ಳು ಮಾತಲಿ ನನ್ನ ಮರುಳು ಮಾಡದೆ ನೀನು |
ಒಳ್ಳೆಯ ಮಾತಿಂದ ಬಿಡು ನನ್ನ ಸುತೆಯನು || 62 ||

**ಭೈರವಿ - ಅಷ್ಟ**
ಮಗನು ಐತಹವರೆಗೆ | ನಿಲ್ಲಿಸಿ ನಿಮ್ಮ |
ಹಗರಣವನು ಕಡೆಗೆ ||
ಹಗೆಯು ನಮ್ಮೊಳಗೇಕೆ ಸ್ವಲ್ಪ ತಾಳುವುದಿನ್ನು |
ಜಗಳದಿ ಸಾವು ನೋವು || 63 ||

ಬಾಯ ಹೊಯ್ಯುವೆನು ತಾಳು | ತವ ಸುತಗಾಗಿ |
ಕಾಯುವುದೆಲ್ಲ ಹಾಳು ||
ಸಾಯಕದಿಂದ ನಿನ್ನನು ಎದುರಿಸಿ ನಿನ್ನ |
ಕಾಯ ಭಂಗಿಪೆನು ತಾಳು || 64 ||

**ವಾರ್ಧಕ**
ವೀರತನದೊಳಗುಭಯ ನೃಪರು ಹೊಯ್ದಾಡೆ ಕೇ |
ತಾರಗೌಳನು ಧುರದಿ ಕೈಸೋತು ಬಳಲಲ್ಕೆ |
ಧಾರಿಣಿಗವನ ನೂಕುತಬ್ಬರಿಸಿ ಕೇಳಿದ ಕುರಂಜಿಭೂಪನು ಕ್ಷಣದಲಿ ||
ತೋರದಿರೆ ಎನ್ನ ಸುಕುಮಾರಿಯಳ ನಿನ್ನ ಯಮ |
ನೂರ ಸೇರಿಸುವೆನೆನುತಿರಲಿತ್ತ ಚರನಂತೆ |
ಮಾರುವೇಷದಿ ಬಂದು ಮಹರಾಣಿಗೀವಾರ್ತೆಯನು ವರಾಳಿಯು ಪೇಳ್ದನು || 65 ||

**ಸಾರಂಗ - ಅಷ್ಟ**
ಕಾಳಗದಿಂದ ಬಂದೆ | ನಿಮ್ಮೆಡೆಗೆ ನಾ |
ಹಾಳು ಸುದ್ದಿಯನು ತಂದೆ ||
ಹೇಳಲೇನಾರಿಪು ಖೂಳತನದಿ ದೊರೆಯ|
ಸೋಲಿಸಿ ರಣದಿ ಹೀಯಾಳಿಸುತಿಹನಮ್ಮ || 66 ||

ಎತ್ತಲಾದರೂ ಪೋಪುದು | ವಿಘ್ನಗಳನ್ನು |
ಅತ್ತು ಕೂತರೆ ಬಪ್ಪುದು ||
ಚಿತ್ತಜಾರಿಯ ಮೇಲೆಯಿತ್ತು ಭಾರವ ನೀವೀ |
ಹೊತ್ತೇನೆ ಅವರು ಬೆಂಬೆತ್ತಿ ಬರುವ ಮುನ್ನ || 67 ||

**ನೀಲಾಂಬರಿ - ರೂಪಕ**
ತತ್ತರಿಸಿದಳದ ಕೇಳ್ದ್ವಳೆಗೊರ |
ಗುತ್ತಾ ರಮಣಿಯು ಮಗುಳೆಚ್ಚೆ |
ತ್ತತಿಶೋಕದಿ ಬಂದಾ |
ಪತ್ತಿಗೆ ಮರುಗಿದಳು || 68 ||

ಏನಪರಾಧಕೆ ಶಿಕ್ಷೆಯು |
ಕಾಣೆನು ಬಟ್ಟೆಯ ದೇವರೆ |
ಮಾನವು ಕಳೆಯುವ ಮುನ್ನವೆ |
ಕಾನನ ಸೇರುವೆನು || 69 ||

ಎಂದುರೆ ಗೋಳಿಡುತಲಿ ಹಸು |
ಗಂದನ ಜೊತೆಗತಿ ಶೋಕದಿ |
ಬಂದಳು ವಿಪಿನಕೆ ವಿಧಿಯಾ |
ನಂದವೆ ನಿನಗೆನುತ || 70 ||

**ಭೈರವಿ - ಝಂಪೆ**
ಜಾಣ ಜಾಣೆಯರಿತ್ತ ಠಾಣಪುರ ವೈಭವವ |
ಕಾಣುತಾಗಮಿಸಿದರು ಬಲುತೋಷದಿಂದ ||
ಕ್ಷೋಣಿಪನ ಹುಡುಕಿ ತಾ ಕಾಣದಿರೆ ಭಯದಿ ಕ |
ಲ್ಯಾಣಿ ಕೇಳಿದಳಮಾತ್ಯನನು ಬಳಿ ಕರೆದು || 71 ||

ತಂದೆಯೆಲ್ಲಿಂದು ಮುದದಿಂದ ಹೇಳೆನಗೀಗ |
ಲೊಂದು ಸುದ್ದಿಯನೊರೆವೆನೆನಲು ಆ ಸಚಿವ || 72 ||

ನಿನ್ನ ಕದ್ದೊಯ್ದ ಮೋಹನನು ಎಂಬುವ ಸುದ್ದಿ |
ಯನ್ನು ಕೇಳಿದ ನೃಪನು ಖಿನ್ನನಾಗುತ್ತ ||
ಬನ್ನಪಡಿಸುತ ಧುರದಿ ಕನ್ಯೆಯನು ಕರೆತರುವೆ |
ನೆನ್ನುತಲಿ ಕಾಳಗಕೆ ಪೋದನೆಂದೆನಲು || 73 ||

**ಸೌರಾಷ್ಟ್ರ - ತ್ರಿವುಡೆ**
ಮೋಸವಾಯ್ತಿಗೆಂದು ಮೋಹನ |
ಬೇಸರವ ತಾಳಿದನು ಪುರದಲಿ ||
ಘಾಸಿಯಪ್ಪುದು ಜವದಿ ತೆರಳುವೆ | ನೀ ಸಮಯದಿ || 74 ||

ಕ್ಲೇಶಗೊಳುತಾ ನಾರಿ ಪೇಳ್ದಳು |
ಭಾಸುರಾಂಗನೆ ಬರುವೆನಾ ಧರ ||
ಣೀಶನಿಗೆ ನಿಜವರುಹಿ ಬಲು ಸಂ | ತೋಷಗೊಳಿಪೆ || 75 ||

ಅಂಜುತವಸರದೊಳಗೆ ಭೂಪ ಕು |
ರಂಜಿಯನು ಕಾಣಲ್ಕೆನುತ ಬರೆ ||
ಸಂಜೆಯಾದುದರಣ್ಯದೊಳು ಶಿವ | ರಂಜಿನಿಯಳು || 76 ||

**ಶಿವರಂಜಿನಿ - ರೂಪಕ**
ನಡೆಯೆ ನಾನಿನ್ನು ಜೀವ | ರಿಡಿದು ಬಾಯ್ಬುತ್ತುತಿದೆ |
ನಡುಗುತಿದೆ ದೇಹ ಕೈಕಾಲು ||
ಅಡಿಯಿಡೆನು ಶಿವನೆ ಎಂ | ದೂಡನೆ ಹಾ ಹಾಯೆನುತ |
ಪೊಡವಿಯೊಳು ಬಿದ್ದಳಾಗಬಲೆ || 77 ||

ಹುಡುಗ ಗಾಬರಿಯಿಂದ ಹಡೆದವ್ವೆಯನು ಕರೆದು |
ನುಡಿಯಮ್ಮ ಭಯವೆನಗೆ ಎನಲು ||
ಒಡನೆ ಕಣ್ದೆರೆದೆನ್ನ ಒಡಲಕುಡಿ ಬಾರಿಷ್ಟ |
ಪಡೆದ ಭಾಗ್ಯವು ಎನ್ನುತಳುತ || 78 ||

ಯಾರ ಪಾಪದ ಶಾಪವೀರೀತಿಯಮ್ಮನುರೆ |
ಗಾರುಗೆಡಿಸುತಲಿದೆಯೊ ಶಿವನೆ ||
ಪಾರುಗಾಣಿಸುಯೆಂದು ನಾರಿ ದುಃಖಿಸುವೆಡೆಗೆ |
ಸಾರಿದನು ಜಂಜೂಟಿ ಮುನಿಯು || 79 ||

**ಮಧ್ಯಮಾವತಿ - ಏಕ**
ದುಗುಡವೇನು ಯಾರೆ || ಬಿಡು ನೀ |
ಭಗಿನಿಯ ಸಮ ಬಾರೆ ||
ಮೊಗ ನೋಡಲು ಧರಣಿಪ ಸತಿಯಂತಿಹೆ |
ಮಗನೊಡನಿಲ್ಲ್ಯೆತಂದಿಹುದೇತಕೆ || 80 ||

**ನಾಟಿಕುರಂಜಿ - ಅಷ್ಟ**
ಮುನಿಯೆ ಎನ್ನಯ ದುಃಖ ಏನು ಪೇಳುವೆನು |
ಇನಿಯನು ವೈರಿಯ ಕೈಸೆರೆಯಹನು ||
ಎನಗು ಎನ್ನಯ ಹಸುಳೆಗೂ ಕೇಡುಬಹುದು |
ಎನುತಲೀ ಹಳುವ ನಾ ಸೇರಿಹುದಹುದು || 81 ||

**ಮಧ್ಯಮಾವತಿ - ಏಕ**
ಮರುಗುವೆ ನಾ ನಿಮಗೆ | ನಿಮ್ಮನು |
ಪೊರೆಯುವೆ ಕಡೆವರೆಗೆ ||
ತೆರಳುವನಮ್ಮಾಶ್ರಮವಿಹುದಾ ಕಡೆ |
ಹರುಷದಿ ಸುತನೊಡನಿರು ನೀನೆಂದನು || 82 ||

**ಕಂದ**

ಈ ಪರಿಯಿಂ ಸಂತೈಸುತ |
ತಾಪಸಿ ತನ್ನಾಶ್ರಮಕೈದಲಿತ್ತ ನೃಪನುಂ ||
ಕೋಪಿಸುತಲಿ ರಣರಂಗದಿ |
ಭೂಪನ ಬಹುಪರಿ ಜರೆಯುತಲಿರ್ದನದೆಂತೆನೆ || 83 ||

**ಭಾಮಿನಿ**

ತರಳೆಯನು ಕರೆತಂದು ಒಪ್ಪಿಸ |
ದಿರಲು ನಿನ್ನಯ ಪ್ರಾಣವುಳಿಸೆನು |
ಪೊರೆವರಾರೆಂದೊರಲಿ ಖಡ್ಗವ ಜಡಿಯುತಿರಲಾಗ ||
ಶರಜಮುಖಿಯೊಡ ಬಂದು ತಡೆತಡೆ |
ತರಿಯದಿರು ಎನೆ ಮೋಹನನು ಹಿಂ |
ತಿರುಗಿ ಕಲ್ಯಾಣಿಯನು ಕಾಣುತ ಕರೆದು ಹತ್ತಿರಕೆ || 84 ||

**ಯರಕಲಕಾಂಬೋಧಿ - ಅಷ್ಟ**

ಎಲ್ಲಿಗೆ ಹೋದೆ ಜಾತೆ | ನಿನ್ನನು ಹುಡುಕು |
ತೆಲ್ಲೂ ಕಾಣದಲೆ ಸೋತೆ ||
ಕಳ್ಳತನದೊಳೀತನೊಯ್ದಿಹನೆನೆ ಕೇಳು |
ತಿಲ್ಲಿಗೂ ಬರುವುದಾಯ್ತು | ಧುರವಾಯ್ತು || 85 ||

ತಾತ ನೀ ತಿಳಿದೆ ಮಿಥ್ಯ | ಭೂಪನ ಸುಮ್ಮ |
ನೇತಕೆ ಬಡಿವೆ ವ್ಯರ್ಥ ||
ಈತ ವನದಿ ನನ್ನ ಮಾನ ಕಾಯ್ದವ ನಾನು |
ಪ್ರೀತಿಯೊಳ್ವರೆದು ತಂದೆ | ಕೇಳ್ತಂದೆ || 86 ||

**ನವರೋಜು - ಏಕ**

ಸಂತಸವೀಗೆನಗಾಯ್ತು | ಮನ |
ಚಿಂತೆಯದೂ ದೂರಾಯ್ತು ||
ಇಂತೆಂದರಸನ ಕ್ಷಮೆ ಕೇಳಲ್ಕವ |
ನಂತರ್ಯವ ಕೇಳಲ್ಕಿಂತೆಂದನು || 87 ||

ಬೇಸರವಿಲ್ಲೆಲ್ಯ ಶೂರ | ಜನ |
ದೂಷಣೆಯಾಯಿತು ದೂರ ||
ತೋಷಧಿ ಬಾಳುವ ಮುಂದಕೆ ಕೇಳ್ನೀ |
ನೀ ಸತಿಯಳ ಕೈಹಿಡಿಯ್ಯೆಯಾತ್ಮಜ || 88 ||

ಸಮ್ಮತಿಯಾದರೆ ಈಗ | ನ |
ಮ್ಮಮ್ಮನ ಕಾಣುವ ಬೇಗ ||
ಒಮ್ಮತದಿಂದಲಿ ಮಾತಾಪಿತೃಗಳು |
ನಮ್ಮನು ಹರಸಲಿಕೇನಿದೆ ತೊಂದರೆ || 89 ||

**ಕಂದ**

ಇಂತೊರೆದೆಲ್ಲರು ಶೀಘ್ರದಿ |
ಅಂತಃಪುರದೆಡೆಗೆ ಸಾರುತ ನೋಡೆ ಭೂಪನ ||
ಕಾಂತೆಯ ಕಾಣದೆ ಬಲುತರ |
ಚಿಂತಾಂಬುಧಿಯೊಳು ಮುಳುಗುತ ಮೋಹನ ನುಡಿದಂ || 90 ||

**ನೀಲಾಂಬರಿ - ಕೋರೆ**
ಎತ್ತ ಪೋದಳೊ ಮಾತೆಯು | ನಮ್ಮನು ಜೀವ |
ತೆತ್ತು ಸಾಕಿದ ಜ್ಯೋತಿಯು ||
ಹೆತ್ತೆ ಪೌರುಷವಂತನ | ನೀ ನಿನ್ನ ಆ |
ಪತ್ತಿಗಾಗದೆ ಹೋದನ || 91 ||

ಎಲ್ಲರಸುವೆನೊ ದೇವಾ | ತಾಯಿಹ ತಾಣ |
ಬಲ್ಲವರಿಹರೇ ಸೋವ ||
ನಲ್ಮೆಯಾನುಜ ಪೋರನು | ಎಂದಳಲುತ |
ಲೆಲ್ಲರಿಗಿಂತೆಂದನು || 92 ||

**ಶಂಕರಾಭರಣ - ತ್ರಿವುಡೆ**
ಹಡೆದ ತಾಯಿಯ ನೋಡುವನ್ನಗ |
ವಡಬಡೆನು ನಾ ಲಗ್ನಕೆ ||
ನಡೆಯಲವಳನು ಹುಡುಕುವಡೆ ಚರ |
ಗಡಣವೀಗ || 93 ||

ಜಡಜನೇತ್ರೆಯೆ ಕೇಳು ತಾಯ್ಸಿ |
ಕ್ಕೊಡನೆ ಪತ್ರವ ಬರಸುವೆ ||
ತಡವ ಮಾಡದೆ ವರಿಸುವೆನು ಪರ |
ಗೊಡವೆಯಿಲ್ಲ || 94 ||

**ಭಾಮಿನಿ**
ಮರೆಯದಿರಿ ನಿಮಗಾಗಿ ನಾ ಕಡೆ |
ವರೆಗೆ ಕಾಯಲು ಸಿದ್ಧಳಿಹೆ ಪರ |
ಪುರುಷರನು ನಾನೊರಿಸೆನೆಂದೆರಗಿದಳು ಕಲ್ಯಾಣಿ ||
ಮರುಗುತಲಿ ವಿಧಿಲಿಖಿತವೆನ್ನುತ |
ಮರಳಿ ಬಂದ ಕುರಂಜಿ ತನ್ನಯ |
ತರಳೆಯನ್ನೊಡಗೊಂಡತಾಣಾಪುರಕೆ ವ್ಯಾಕುಲದಿ || 95 ||

**ಕಾಂಭೋದಿ - ಝಂಪೆ**
ಸರಿಯೆ ಮೂರೆರಡು ವತ್ಸರವು ಶಿವರಂಜಿನಿಯ |
ಕರೆದು ಕಾನನದಿ ಜಂಜೂಟಿ ||
ತರಳನಿಂಗೆರೆದೆನಾನುರುತರದ ವಿದ್ಯೆಗಳ |
ಪರಿಕಿಸುವೆನೀಗವನನೆನಲು || 96 ||

ನೀವು ಕರುಣೆಯೊಳೆಮ್ಮನೀವರೆಗೆ ಕಾದವರು |
ದೇವ ನಿಮ್ಮಡಿಗೀಗ ಮಗನ ||
ಕಾವುದೆಂದೊಪ್ಪಿಸಲಿಕಾ ವನಿತೆ ತರಳನನು |
ನೇವರಿಸಿ ಕರೆಯೊಯ್ದನಾಗ || 97 ||

**ಸೌರಾಷ್ಟ್ರ - ತ್ರಿವುಡೆ**
ಇತ್ತ ಧೂರ್ತ ವರಾಳಿ ದಿನ ಕಾ |
ಯುತ್ತಲಿರ್ದನು ಶಹನ ವಿದ್ಯೆಯ |
ಪೂರ್ತಿಗೊಳಿಸಿದ ಕಾಲವೆಂದಾ | ದೈತ್ಯ ತಿಳಿದು || 98 ||

ಬಂದಿತ್ಯೆ ಸತ್ಸ್ವಮಯ ಮುನಿಯನು |
ಕೊಂದು ಅವನಂದದಲಿ ವೇಷವ |
ನಿಂದು ಧರಿಸುತ ಕಾರ್ಯ ಸಾಧಿಪೆ | ನೆಂದು ಬಗೆದು || 99 ||

ಬಾಲನೊಡನೈತಂದು ಮುನಿವರ |
ಕಾಳಿಯಾಲಯವನ್ನು ಪೊಕ್ಕೊಡೆ |
ಖೂಳ ಹಿಂಬಾಲಿಸಿದ ಕರಿ ಮಾ | ರ್ಜಾಲದಂತೆ || 100 ||

**ಸಾಂಗತ್ಯ - ರೂಪಕ**

ಗುಡಿಯೊಳಗಾಮುನಿ ಹುಡುಗನ ಪ್ರೀತಿಯೊಳ್ |
ನುಡಿಸಿದ ಪ್ರೀತಿಯಿಂದಪ್ಪಿ ||
ದೃಢಚಿತ್ತದಿಂದ ನೀನರ್ಚಿಸುತಿರು ದೇವಿ |
ಮೃಡರಾಣಿಯನ್ನು ಕಣ್ಮುಚ್ಚಿ || 101 ||

ಕಾಳಿಯನರ್ಚಿಸೆ ಸುಮಗಳ ತರುವೆನೆಂ |
ದಾಲಯವನ್ನು ತಾ ಬಿಟ್ಟು ||
ಲೀಲೆಯಿಂದಲಿ ಬರಲಾ ಮುನಿಯನ್ನು ವ |
ರಾಳಿಯು ತಡೆದೆಂದನಾಗ ||102 ||

**ಕೇದಾರಗೌಳ - ಝಂಪೆ**

ಬಡಮುನಿಯೆ ನಿಲ್ಲುನಿಲ್ಲು | ನೀ ಕಾಲ್ಗೆ |
ತೊಡಿಸಿಕೊಂಡಿರುವ ಮುಳ್ಳು ||
ಕುಡಿದು ಬಿಸಿ ಶೋಣಿತವನು | ಗೈವೆ ಹಸಿ |
ದೊಡಲಿಂಗೆ ತಂಪನಿನ್ನು || 103 ||

ತಾಪಸಿಯು ನನ್ನನೇಕೆ | ಕೊಲುವೆ ಮಹ |
ಪಾಪ ಬರುವುದೆಲೊ ಜೋಕೆ ||
ಕಾಪಿಡುವ ಕೊಲುವರಾರು | ನೀ ನರಕ |
ಕೂಪದೊಳು ಬೀಳ್ವೆ ಸಾರು || 104 ||

ಗಡ್ಡಬಿಟ್ಟವನ ಮಾತ | ಕೇಳೆ ನಾ |
ನಡ್ಡಗಟ್ಟಿಲ್ಲ ಧೂರ್ತ ||
ದಡ್ಡಮುನಿಯೆಂದು ಖತಿಯ | ತಾಳುತಲಿ |
ಖಡ್ಗದಿಂ ಕಡಿದ ಮುನಿಯ || 105 ||

**ಭಾಮಿನಿ**

ಮುನಿಯ ವೇಷವ ಧರಿಸಿ ಬಂದಾ |
ದನುಜನಾಲಯ ಪೊಕ್ಕು ಕಾಳಿಯ |
ನೆನೆಯುತಿಹ ಬಾಲಕನ ನೋಡುತ ವಿಜಯದುತ್ಸಹದಿ ||
ಮನದ ಧೂರ್ತತೆ ಮರಸಿ ತನ್ನಾ |
ನನದಿ ನಗುವನು ತೋರಿಸುತ್ತಾ |
ತನನು ಹತ್ತಿರ ಕರೆದು ಪ್ರೀತಿಯ ನಟಿಸುತಲಿ ನುಡಿದ || 106 ||

**ಜಂಜೂಟಿ - ಏಕ**

ಶುದ್ಧ ಮನದಿ ಸೇವಿಸೆನುತ | ಮುದ್ದು ಮಾಡಿದ ||
ಮದ್ಯದೊಳಗೆ ಲೇಹವನ್ನು | ಅದ್ದಿ ನೀಡಿದ || 107 ||

ಗುರುವೆ ನನ್ನ ತಲೆಯಲೇನೋ | ತಿರುಗುವಂತಿದೆ ||
ತರು ಗಿಡಗಳು ದ್ವಿಗುಣ ಹೊಂದಿ | ಜರುಗುವಂತಿದೆ || 108 ||

ಬೆದರಬೇಡ ಶಿಷ್ಯ ಮನವು | ಮುದವ ತಾಳ್ವುದು ||
ಮೊದಲ ಚಿಂತೆಯೆಲ್ಲ ದೂರ | ಕದಲಿ ಪೋಪುದು || 109 ||

ಎನುತ ಮತ್ತೆ ಮಾಂಸವನ್ನು | ಮುನಿಯು ಉಣ್ಣಿಸಿ ||
ತನುವ ಶಕ್ತಿ ವರ್ಧಿಸುವುದು | ಎನಿಪೆ ಸಾಹಸಿ || 110 ||

**ವಾರ್ಧಕ**
ಕುಡಿಸಿ ಮದ್ಯದಿ ಲೇಹವನು ಬೆರೆಸುತಾ ಮುಗ್ದ |
ಹುಡುಗನಾಲೋಚನಾ ಬಲ ಸ್ಥಗಿತಗೊಳಿಸುತ್ತ |
ದಡಿಗ ಮತ್ತವನ ಕರೆತಂದತಾಣಾಪುರಕೆ ಮಂತ್ರಿಸಿದ ಭಸ್ಮವಿತ್ತು ||
ತಡವ ಮಾಡದೆ ಅಂತಃಪುರವ ಸೇರುತ ನೀನು |
ಅಡಗಿಯಾರರಿಯದಂದದಿ ಮಲಗಿ ನಿದ್ರಿಸಿಹ |
ಜಡಜನೇತ್ರೆಯನು ಕರೆತಂದಡವಿಯೊಳಗಿರಿಪುದೆಂದೊರೆದು ತೆರಳೆ ಶಹನ || 111 ||

**ಸೌರಾಷ್ಟ್ರ - ತ್ರಿವುಡೆ**
ಸಪ್ಪಳಾಗದ ತೆರದೊಳಗೆ ಮೇ |
ಲುಪ್ಪರಿಗೆಯೇರಿದನು ನಿದ್ರೆಯೊ |
ಳಿಪ್ಪ ಕಲ್ಯಾಣಿಯನು ಕಾಣುತ | ತೃಪ್ತನಾಗಿ || 112 ||

ಚದುರೆಯಳ ತನುವಿಂಗೆ ಭಸ್ಮವ |
ನುದುರಿಸುತ ಮತ್ತೇಳದಂದದಿ |
ಕುದುರೆಯೇರಿದ ನಾರಿಯೊಡ ಸಾ | ಗಿದನು ವನಕೆ || 113 ||

**ಶಹನ - ಅಷ್ಟ**
ವೇಳೆಯ ಕಳೆಯದೆ ಬಂದು | ಶಹನ |
ಕಾಳಾಹಿವೇಣಿಯ ನೋಡಿ ಬಳಿ ನಿಂದು ||
ಏಳುವಳಿನ್ನೇಕೆಯೆಂದು | ತಾನಾ |
ಮೇಲೆ ಕೇಳುವ ನೀನು ಯಾರಮ್ಮ ಎಂದು || 114 ||

ತರುಣಿಯು ಮೈಮುರಿದೆದ್ದು | ಆ |
ಚ್ಚರಿಯ ತಾಳುತ ಭಯದಿ ಧರಣಿಗೆ ಬಿದ್ದು ||
ಅರಮನೆಯಲ್ಲಿ ಮಲಗಿದ್ದು | ಕಣ್ |
ತೆರೆಯಲಿಲ್ಲಿಹೆ ನಾನಾಪತ್ತನು ಹೊದ್ದು ||115 ||

ಯಾರಿಹರಿಲ್ಲೆಂದು ನೋಡಿ | ಸುಕು |
ಮಾರನ ನೋಡುತ ಕೇಳ್ದಳು ಪ್ರೌಢೆ ||
ಚೋರತನದೊಳೆನ್ನ ತಂದೆ | ಅವಿ |
ಚಾರಿ ನಾ ದೊರೆಯುವಳಲ್ಲ ಹೋಗಿಂದೆ || 116 ||

**ನಾದನಾಮಕ್ರಿಯೆ - ಅಷ್ಟ**
ತರಲಿಲ್ಲ ನಿನ್ನ ನಾ ಕೆಡಿಸಲು | ತಂದೆ |
ಗುರುವಿನಾಣತಿಯನು ನಡೆಸಲು ||
ಗುರುತಿಲ್ಲ ಯಾರೆಂದು ನುಡಿಸಲು | ಶೀಲ |
ಹರಣಗೈದರೆ ಇಹೆ ಬಿಡಿಸಲು || 117 ||

ಆಹಾ ಬಲುಬುದ್ಧಿವಂತನು | ಬಲು |
ದ್ರೋಹಿ ಎಷ್ಟಕೂ ನಿನ್ನ ನಂಬೆನು ||
ಮೋಹಿಸಿದರೆ ತಲೆಕೊಂಬನು | ನಿಸ್ಸಂ |
ದೇಹ ನನ್ನಯ ಪಿತ ಬರುವನು || 118 ||

**ಭಾಮಿನಿ**
ಬರಲಿ ಬಂದರೆ ನಿನ್ನವರು ಅನು |
ವರಕೆ ಹೆದರುವನಲ್ಲ ನಿನ್ನ |
ನ್ನಿರಿಸುವೆನು ಶಿವೆಗುಡಿಯೊಳೆನ್ನುತ ನುಡಿಯುತಿರಲಿತ್ತಾ ||
ಧರಣಿಯೊಳಗೆಲ್ಲರಸೆ ಮಾತೆಯ |
ಇರವ ಕಾಣೆನು ಎಂದು ಮೋಹನ |
ಕೊರಗುತಿರೆ ಜಂಜೂಟಿ ಮುನಿಯೈತಂದನಾ ಸಭೆಗೆ || 119 ||

**ಕೇದಾರಗೌಳ - ಝಂಪೆ**
ಬಂದ ಆ ಮುನಿಯ ಕಂಡು | ಮೋಹನನು |
ಚಂದದಿಂದಿರುಗೊಂಡು ||
ಕುಂದಣಾಸನ ನೀಡಿದ | ಉಪಚರಿಸಿ |
ಬಂದಂದವನು ಕೇಳಿದ || 120 ||

**ಭೈರವಿ - ಝಂಪೆ**
ತಾಯ ಕಳಕೊಂಡು ಮ | ತ್ತಾಯ ತಪ್ಪಿದೆ ಬಂದ |
ಪಾಯವನು ನೀ ತಿಳಿಯದಾದೆ ||
ಜಾಯೆಯಾಪಳ ಕುಟಿಲು |
ಪಾಯದಿಂದೊಯ್ದವರ |
ಕಾಯ ಭಂಗಿಸದೆ ಯಾಕಿರುವೆ || 121 ||

**ಸೌರಾಷ್ಟ್ರ - ಅಷ್ಟ**
ದಿಟವೇನೊ ನಾ ಕೆಟ್ಟೆ ಜಟಿಲಗೊಂಡಿದೆ ಬಾಳು | ಮುನಿಯೆ ಕೇಳು || ಬಲು |
ಕುಟಿಲದೊಳೊಯ್ದಂತದಟು ಯಾರಿಗಿಹುದಯ್ಯ | ಮುನಿಯೇ ಹೇಳು || 122 ||

ತಿಳಿದುದ ಪೇಳಿರಿ ಸುಳಿವು ಕೊಟ್ಟರೆ ಸಾಕು | ಮುನಿಯೇ ಕೇಳು || ಕೊಳು |
ಗುಳದೊಳವರ ಕೊಂದು ಲಲನೆಯ ತರುವೆನು | ಮುನಿಯೆ ಹೇಳು || 123 ||

**ಕಂದ**
ಬಾರೆನ್ನಯ ಜೊತೆ ಸೇನಾ |
ವಾರದೊಡೆನುತಾ ಮುನಿಯು ಕರೆದೊಯ್ಯುತವನಂ ||
ಘೋರಾರಣ್ಯದಿ ಶಹನನ |
ತೋರಲ್ಮೋಹನನು ಬೆಚ್ಚಿ ಮುನಿಯೊಡನೆಂದಂ || 124 ||

**ಅಠಾಣ - ಆದಿ**
ಏನು ಚೋದ್ಯವಿದನುಜಾತನೆಂದೆಂಬನು |
ಮಾನ ಮನಕೆ ಸಾಮ್ಯ ನೀನೆ ನೋಡಯ್ಯ ||
ಸಾನುರಾಗದೊಳವನ್ಯಾರೆಂದು ಬೆಸಸೀಗ |
ದೀನಭಾವದಿ ನಿಮ್ಮ ಬೇಡ್ವೆ ಮುನಿರಾಯ || 125 ||

ನಡೆಯು ತಮ್ಮನದೆ ಕಣ್ಕುಡಿ ನೋಟ ನೋಡು ನ |
ಮ್ಮೆಡೆಗೆ ಬಪ್ಪನು ಇನ್ನು ತಡೆಯೆ ಕೇಳಯ್ಯ ||
ಹುಡುಗನ ಬಿಗಿದಪ್ಪಿ ಕೇಳುವೆ ಯಾರಯ್ಯ |
ಹಡೆದವರ್ಯಾಕಿಹೆ ಅಡವಿಯೊಳೆಂದು || 126 ||

ಭುವನದೊಳಿಹುದು ಸಾಮಾನ್ಯ ರೂಪಿನೊಳು ಹೋ |
ಲುವರನ್ಯರನ್ನು ಮಾನವರು ಕೇಳಯ್ಯ ||
ಬವರದಿ ಗೆಲ್ಲಲಾರೆನೊ ಎಂಬ ಭಯದಿ ನೀ |
ನೆವನ ಹೇಳುವುದ್ಯಾಕೆ ಹೋಗು ಸಾಕಯ್ಯ || 127 ||

ಸೋಗು ಹಾಕಿದೆ ನೀನು ನಾಗವೇಣಿಯ ದುಃಖ |
ಕಾಗದಿದ್ದರೆ ಮರಳಿ ಹೋಗಯ್ಯ ಪುರಕೆ ||
ಆಗದಿದ್ದರೆ ನಾನೆ ತಾಗಿ ಹೋರಾಡುವೆ |
ಬೇಗದೊಳವಳ ತಂದೀಗ ಸಲಹುವೆನು || 128 ||

**ಆರ್ಯಸವಾಯ್ - ಏಕ**

ಹಂದೆಯು ನಾನೀಗೆಂದೇಕುರುತರ |
ನಿಂದಿಸಿ ಆಡುವಿರೆನ್ನನ್ನು ||
ಸಂದೇಹವ ಬಿಡು ಕೊಂದವನನು ಕರ |
ತಂದಪೆ ಬಾಲಕಿಯನು ನಾನು || 129 ||

ಬಲಯುತನೆಂಬುದ ತಿಳಿದಿಹೆ ಹೋಗೈ |
ಕೊಳುಗುಳದೊಳಗವನನ್ನೀಗ ||
ಅಳುಕದೆ ರವಿಜನನಿಲಯಕ್ಕಟ್ಟೆನು |
ತಲೆ ಕಳುಹಿದ ಅವನನ್ನಾಗ || 130 ||

**ದ್ವಿಪದಿ**

ಅಣ್ಣತಮ್ಮರು ಕಾದಿಮಡಿವರೆಂದೆನುತ |
ಎಣ್ಣಿಕೊಂಡಾ ಕಪಟಿ ಗಹಗಹಿಸಿ ನಗುತ ||131 ||

ಕನ್ಯೆಯನು ವಶಗೊಂಬೆನೀಗಲೆಂದೆಣಿಸಿ |
ಮಿಣ್ಣನಲ್ಲಿಂದ ಜಾರಿದನು ಗುಣುಗುಣಿಸಿ || 132 ||

**ಭೈರವಿ - ಅಷ್ಟ**

ಎಲವೋ ಕಾಡಿನ ಹುಡುಗ | ನಮ್ಮಯ ಹೊರ |
ವಲಯದೊಳಿಹ ದಡಿಗ ||
ಲಲನೆಯ ನೆವದಿಂದ | ಕಲಹಕಿಳಿದ ನಿನ್ನ |
ಛಲವನ್ನು ತೋರು ಬೇಗ || 133 ||

ವಿಧಿ ಮುಖ್ಯ ಸುರರೆಲ್ಲರು | ಕೆಣಕಲು ನಾನು |
ಬೆದರೆನು ನೀನು ಯಾರು ||
ಬದುಕುವಾಸೆಯಿರೆ | ಚದುರೆಯ ಮರೆತೀಗ |
ಹದುಳದಿ ಹಿಂದೆ ಸಾರು || 134 ||

**(ಯುದ್ಧ - ನಿರ್ಗಮನ)**

**ಇತ್ತ – ವರಾಳಿ- ಕಲ್ಯಾಣಿಯ ಬಲಾತ್ಕಾರ**

**ದ್ವಿಪದಿ**
ಚಿತ್ತ ಚಂಚಲಿಸಿ ಗುಡಿ ಹೊಕ್ಕು ಈಕ್ಷಿಸಿದ |
ಮತ್ತಕಾಶಿನಿಯನ್ನು ಮಾತನಾಡಿಸಿದ || 135 ||

ಕತ್ತೆತ್ತಿ ಕಾಯಲ್ಯೆತಂದನೆಂದೆಣಿಸಿ |
ಹತ್ತಿರಕೆ ನಡೆತಂದು ಕಲ್ಯಾಣಿ ನಮಿಸೆ || 136 ||

**ಕೇದಾರಗೌಳ - ಝಂಪೆ**
ಕಾಮಿನಿಯು ಬಾರೆ ಬಾರೆ | ನೀ ಯೆನ್ನ |
ಕಾಮನಾಟದೊಳು ಸೇರೆ ||
ಸಾಮದಲಿ ನಗುವ ತೋರೆ | ತವ ರೂಪ |
ವೀ ಮಹಿಯೊಳಿಲ್ಲ ನೀರೆ || 137 ||

ಕೆಲ ಸಾರು ವೇಷಧಾರಿ | ಮುನಿ ನಿನಗೆ |
ಉಳಿವಿಲ್ಲ ಪೇಳ್ವೆ ಸಾರಿ ||
ತೊಲಗು ಸಿಗಲಾರೆ ದುಷ್ಟ | ಪ್ರಾಣವನು |
ಕಳಕೊಂಬೆ ಬರಲು ಕಷ್ಟ || 138 ||

**ಶಂಕರಾಭರಣ - ಮಟ್ಟೆ**
ಮುನಿಯ ವೇಷವಹುದೆ ಬಾಲೆ |
ದನುಜನಾ ವರಾಳಿಯಿಂದು |
ಎಣಿಸಿದಂತೆ ನಡೆಯಿತೆಲ್ಲ |
ಎನುತ ಪೇಳಿದ || 139 ||

ಅಣ್ಣ ತಮ್ಮರಲ್ಲಿ ಕಾದಿ |
ಮಣ್ಣುಗೂಡ್ವರಿನ್ನು ಹೆಣ್ಣೆ |
ನಿನ್ನ ಕೆಡಿಸಬಂದೆನೆನುತ |
ಕಣ್ಣು ಮಿಟುಕಿಸೆ || 140 ||

ಅಗ್ರಜನ್ನ ಕೊಂದವರ ಸ |
ಮಗ್ರ ನಾಶಗೈವ ನನ್ನ |
ಉಗ್ರ ಶಪಥ ತೀರಿತಜನ |
ನುಗ್ರಹದಲಿ || 141 ||

ದುರುಳನಿಂತು ಸತಿಯ ಸನಿಹ |
ಬರಲು ಸತಿಯು ಭಯದಿ ಓಡು |
ತಿರಲು ಮೋಹನನು ಶಹನನ |
ಜರೆಯುತೆಂದನು || 142 ||

**ದೇಶಿ - ಮಟ್ಟೆ**
ಬರಿದೆ ಸಾವುದು | ತರವೆ ಏನಿದು |
ತರಿವೆನೆನ್ನುತ | ಶರವನೆಚ್ಚನು ||
ಮುರಿವೆ ಕೊರಳನು | ತರಳೆ ಸಿಕ್ಕಳು |
ಸರಸ ಸಾಕೆಲಾ | ಪುರಕೆ ಸಾರೆಲಾ || 143 ||

ಧುರದೊಳಾ ಯಮ | ಪುರಕೆ ಕಳುಹುವೆ |
ಕರುಳನುಗಿಸುವೆ | ಗರುವ ನಿಲಿಸುವೆ ||
ತೆರಳೊ ಹಿಂದಕೆ | ಗರುವ ಯಾತಕೆ |
ಧುರದಿ ಸಾಯದೇ | ಮರಳು ರಾಜ್ಯಕೆ || 144 ||

**ಭೈರವಿ - ಏಕ**

ಕೆಟ್ಟವನಬಲೆಯನಲ್ಲಿ | ಬೆ |
ನ್ನಟ್ಟಲು ಶಹನನುಯಿಲ್ಲಿ ||
ಕುಟ್ಟಿ ಬಡಿಯೆ ಮೋಹನನ | ಬಲು |
ಸಿಟ್ಟಲಿ ನುಡಿಸಿದನವನ || 145 ||

ಭ್ರಷ್ಟ ಮದಾಂಧನು ನೀನು || ಮತಿ |
ಗೆಟ್ಟು ಸತಿಯನೊಯ್ದವನು ||
ಬಿಟ್ಟಪೆಯಾದರೆ ಹೆಣ್ಣ | ಬಡಿ |
ದಟ್ಟದೆ ಬಿಡುವೆನು ನಿನ್ನ || 146 ||

ಆರೆಲೋ ಕೇಳುವ ನೀನು | ಮದ |
ವೇರಿತೊ ಸೊಕ್ಕಲಿಯಿನ್ನು ||
ಸಾರದಿರಲು ಗತಿಗೋಳು | ವೈ |
ಯಾರಿಯ ಬಿಡೆ ನಾ ಕೇಳು || 147 ||

**ಯರಕಲಕಾಂಭೋದಿ - ಅಷ್ಟ**

ಕಡುಪರಾಕ್ರಮದೊಳಗೆ | ಈರುವರು ಕಂ |
ಗೆಡದೆ ಕಾಳಗದೊಳಗೆ ||
ಒಡಹುಟ್ಟಿದವರೆಂಬುದರಿಯದೆ ಕಾದಲು |
ಅಡಿಗೆ ಬಿದ್ದಾಶಹನ | ಹೇಳಿದನನ್ನ || 148 ||

ಕೊಲ್ಲದಿರೊಂದೇಕ್ಷಣ | ಈ ಸ್ಥಿತಿಗೆಲ್ಲಾ |
ಖುಲ್ಲನಾ ಗುರು ಕಾರಣ ||
ಸೊಲ್ಲಿಸಲವಕಾಶ ನೀಡಿದರವಳಿಗೆ |
ಎಲ್ಲವ ಹೇಳುವೆನು | ಬೇಡುವೆನು || 149 ||

ಮಾನಿನಿಯಳನಿಟ್ಟವ | ಗುಡಿಯೊಳು ಗುರು |
ಯೇನಗೈವನೊ ಕೆಟ್ಟವ ||
ಹೀನನೆನ್ನುತ ನನ್ನ ದೂಷಿಸಿದಳು ಮತ್ತೆ |
ನಾನವಳ ಕಾಣಬೇಕು | ರಕ್ಷಿಸಬೇಕು || 150 ||

**ಮೋಹನ - ಅಷ್ಟ**

ಸಂದೇಹಗೊಂಡು ಮೋಹನನು | ನಾ |
ಹಿಂದೆಯೆ ಬರುವೆ ಜೊತೆಗಿನ್ನು ||
ಎಂದು ಹೊರಡೆ ಶಿವರಂಜಿನಿಯು | ನಡೆ |
ತಂದು ಕಂಡಳು ಉಭಯರನು || 151 ||

ಅಮ್ಮನ ಕಂಡು ಮೋಹನನು | ತಾ |
ನೊಮ್ಮೆಗೆ ನಮಿಸಿ ಪೇಳಿದನು ||
ನಿಮ್ಮನೆಲ್ಲೆಲ್ಲೂ ಹುಡುಕಿದೆವು | ಪರ |
ಬೊಮ್ಮನ ದಯದಿ ಸೇರಿದೆವು || 152 ||

ಕಂದ ನೀ ಹೇಗಿಲ್ಲಿ ಬಂದೆ | ಅರಿಗ |
ಳಿಂದಲೀಪರಿ ನಾನು ಬೆಂದೆ ||
ಎಂದುಸುರಲು ಮಾತೆಗೆಲ್ಲ | ಮುದ |
ದಿಂದ ಪೇಳಿದ ನಡೆದುದೆಲ್ಲ || 153 ||

ಮಗನೇ ಶಹನ ಹತ್ತಿರಕ್ಕೆ | ಬಾ |
ದುಗುಡ ತಳೆದು ನಿಂತೆಯೇಕೆ ||
ಸೊಗಸೇ ಅಗ್ರಜನೊಳು ಮುನಿಸು | ದ್ರೋಹ |
ಬಗೆಯದಿರಣ್ಣಗೆ ನಮಿಸು ||154 ||

ಅಣ್ಣ ನೀನೆಂದರಿಯದಾದೆ | ಬುದ್ಧಿ |
ಯನ್ನು ಮರೆತು ದಡ್ಡನಾದೆ ||
ಮನ್ನಿಸಿರೆನ್ನನು ಎನುತ | ಪಾದ |
ವನ್ನು ಪಿಡಿದ ಬೇಡಿಕೊಳುತ || 155 ||

**ಮಾರವಿ - ಏಕ**
ವೇಳೆಯ ಕಳೆದರೆ ಹಾಳಪ್ಪುದು ಆ |
ಕಾಳಿಕೆ ಗುಡಿಯಲ್ಲಿ ||
ನೀಳಾಲಕಿಯನು | ಖೂಳ ಗುರುವು ಬಲು |
ಗೋಳುಗುಡಿಸುತಿಹನು || 156 ||

ಈ ತತುಕ್ಷಣ ಪೋಗುತ್ತಾಮುನಿಯನು |
ಧಾತುಗೆಡಿಸಿ ಬಹೆವು ||
ಮಾತೆಯೇ ನೀವಿ | ಭೀತಿಯೊಳೀವುದು |
ಪ್ರೀತಿಯೊಳಪ್ಪಣೆಯ || 157 ||

**ಸಾವೇರಿ - ಝಂಪೆ**
ಹೊಕ್ಕರವರೊಂದಾಗಿ | ಪಕ್ಕನಾ ಗುಡಿಯ ಖಳ |
ಸೊಕ್ಕಿನಲಿ ಸತಿಯನೆಳೆಯುತಿರೆ ||
ಸಿಕ್ಕಿದೆಯ ರುಧಿರವನು ಕಕ್ಕಿಸುವೆನೀಗಲಾ |
ಮುಕ್ಕಣ್ಣ ಬರಲಿನ್ನು ಬಿಡೆವು || 158 ||

**ಕುರಂಜಿ - ಅಷ್ಟ**
ಆದರೆ ಏನಚ್ಚರಿ ಸೇಡನಾನೆಣಿಸಿ |
ಅರೆದು ಲೇಹವ ಬಲುಪಾಯದಲುಣಿಸಿ ||
ಕಿರಿಯನೊಡನೆ ಹೋರಿ ಸಾವುದಕೆಂದು |
ವಿರಚಿಸಿದಾ ತಂತ್ರ ಬರಿದಾಯ್ತಿಯಿಂದು || 159 ||

**ಮೋಹನ - ಮಟ್ಟೆ**
ಎಲವೋ ಧೂರ್ತ ಯಾತಕಿಂತ |
ಹೊಲಸು ಕೃತ್ಯ ಗೈವೆ ವ್ಯರ್ಥ |
ತೊಲಗು ಬಂದ ದಾರಿಯಿಂದ |
ಕೊಲುವ ಪೂರ್ವದೆ || 160 ||

ಆರು ವರ್ಷ ವಿದ್ಯೆ ಶಾಸ್ತ್ರ|
ಧಾರೆಯೆರೆದೆ ಯಾಕೆ ಬಂದೆ |
ಭೂರಿ ಚೋದ್ಯ ಗುರುವೆ ತವ ವಿ |
ಚಾರ ಹೇಳಯ್ಯ || 161 ||

ಕೋಪವೇಕೆ ಕೇಳಿ ನಿಜದ |
ತಾಪಸಿಯೆ ನಾನಲ್ಲ ಭಳಿರೆ |
ಭಾಪು ಎನುತ ಖಳ ವರಾಳಿ |
ರೂಪ ತಾಳಿದ || 162 ||

**ಕುರಂಜಿ - ಅಷ್ಟ**
ಮೋಸಹೋದೆಯ ಮುಗ್ಧ ಬಾಲ ನೀನೆನಗೆ |
ಗಾಸಿ ಗೈದಾ ಗುರುವನ್ನು ನಾ ಹೀಗೆ ||
ವೇಷವ ಧರಿಸಿ ಬಂದೆನು ನಿಮ್ಮ ಬಳಿಗೆ |
ದ್ವೇಷವುಂಟಣ್ಣನ ಕೊಂದಿಹ ಬಗೆಗೆ || 163 ||

**ಭೈರವಿ - ಏಕ**
ಕೋಪದಿ ಬರುತಿರಲವರು | ಆಟಾ |
ಟೋಪದಿ ಖಳ ಗರ್ಜಿಸಲು ||
ದೀಪಕೆ ಆರುವ ಕಾಲ | ನಿನ್ನ |
ಕಾಪಿಡುವರು ಯಾರ್ಖಳ || 164 ||

ಬಾಲರೆ ತಿಂಬೆನೆನುತ್ತ | ಖತಿ |
ತಾಳೆ ಕುಮಾರರು ಮತ್ತಾ ||
ಸೀಳಲು ಖಡುಗದಿ ತಲೆಯ | ಖಳ |
ಬೀಳಲು ಕರೆದರು ಸತಿಯ || 165 ||

**ಭಾಮಿನಿ**
ಪರರ ಪೀಡಿಸಿ ಹರುಷ ತಾಳುವ |
ದುರುಳರಿಗೆ ಗತಿಯಿದೆಯೆನುತ್ತಾ |
ತರಳೆಯನ್ನೊಡಗೊಂಡು ಬಂದರು ಮಾತೆಯಿದ್ದೆಡೆಗೆ ||
ಹರುಷದಲಿಯವರನ್ನು ಹರಸುತ |
ಪುರಕೆ ತೆರಳುವುದೆಂದು ಶೀಘ್ರದಿ |
ಬರುತಿರಲು ಕಲ್ಯಾಣಿ ಕಲ್ಯಾಣವನು ತಾವೆಣಿಸಿ || 166 ||

**ದ್ವಿಪದಿ**
ಸುತೆಯ ಕಾಣದ ಕುರಂಜಿಯು ವ್ಯಥಿಸುತಿರಲು |
ಅತಿ ಜವದಿ ಬಂದೆರಗಿ ಚರರು ತಿಳಿಸಿದರು || 167 ||

ನಿನ್ನಣುಗೆಯನು ಪೊರೆದು ಮತ್ತೆ ಮಾತೆಯನು |
ತನ್ನೊಡನೆ ಕರೆತಂದ ಕೇಳು ಮೋಹನನು || 168 ||

ಪರಿಣಯಕೆ ಬಹರೀಗ ದಿಬ್ಬಣವು ಸಹಿತ ||
ಹರುಷ ತಾಳಿದ ಭೂಪ ನುಡಿದ ಸರಿಯೆನುತ || 169 ||

ಕಂಗೊಳಿಪ ನವಜೋಡಿಗೆತ್ತಿ ಆರತಿಯ |
ಮಂಗಳವು ಜಗಕೆಂದು ಮುಗಿಸುವೆನು ಕತೆಯ || 170 ||

ಭಾಗವತ ನಾರ್ಣಪ್ಪ ಉಪ್ಪೂರರಣುಗ |
ನಾಗಿಹೆ ದಿನೇಶನೆಂಬವ ಸಣ್ಣ ಹುಡುಗ || 171 ||

ಆಡಿಪಾಡುವರೆ ತಪ್ಪಿರೆ ತಿದ್ದಿಕೊಳ್ಳಿ |
ಬೇಡುವೆನು ಹರಸಿರೆನ್ನನು ಪ್ರೀತಿಯಲ್ಲಿ || 172 ||

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಕವಿಯ ಗಣಕೀಕೃತ ಪ್ರತಿ

**ಪ್ರಸಂಗ ಪ್ರತಿ ಆಧಾರ:** ಕವಿಯ ಗಣಕೀಕೃತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ದಿನೇಶ ಉಪ್ಪೂರ ಎಮ್. ಎನ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ಬರವಣಿಗೆ:** ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ವಿನ್ಯಾಸ:** ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ